# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ಗುಬ್ಬಿ

ದಿನಾಂಕಃ **28.10.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| | ಸತ್ಯ ಪ್ರತಿಜ್ಞೆಯ ಮೇರೆಗೆ |

## ಪಾಟೀ ಸವಾಲುಃ-ಪ್ರತಿವಾದಿಗಳ ಪರ ವಕೀಲರಾದ ಶ್ರೀ. ಕೆ ಜಿ ಎನ್ ರವರಿಂದ

ಈ ದಾವಾದಲ್ಲಿ ಯಾರೆಲ್ಲಾ ಪ್ರತಿವಾದಿಗಳು ಇದ್ದಾರೆ ಎಂದು ಗೊತ್ತಾ ಎಂದರೆ ಸಾಕ್ಷಿಯು ಚಿಕ್ಕರಂಗಯ್ಯ ರವರ ವಿರುದ್ಧ ಈ ದಾವಾ ಸಲ್ಲಿಸಿದ್ದಾರೆ ಎಂದು ನುಡಿಯುತ್ತಾರೆ. ಚಿಕ್ಕರಂಗಯ್ಯ ರವರು ಈಗ ತೀರಿಕೊಂಡಿದ್ದು ಅವರ ಮಕ್ಕಳು ಯಾರು ಎಂದರೆ ಸಾಕ್ಷಿಯು ಮೊದಲನೇ ಹುಚ್ಚಣ್ಣ, 2 ನೇ ನರಸಿಂಹಣ್ಣ, 3 ನೇ ಮಹದೇವಯ್ಯ ಎಂದು ನುಡಿಯುತ್ತಾರೆ. ಗಂಗಮ್ಮ ಏನಾಗಬೇಕು ಎಂದರೆ ಚಿಕ್ಕರಂಗಯ್ಯ ರವರ ಮಗಳು ಎಂದು ನುಡಿಯುತ್ತಾರೆ. ದಾವಾ ಅನುಸೂಚಿ ಸ್ವತ್ತು ಯಾವ ಊರಿನಲ್ಲಿ ಇರುತ್ತದೆ ಎಂದರೆ ಕೊಮ್ಮನಹಳ್ಳಿ ಗ್ರಾಮದಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ದಾವಾ ಅನುಸೂಚಿ ಸ್ವತ್ತಿನ ಸ.ನಂಬರ್ ಏನು ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ವಿಸ್ತೀರ್ಣ ಏನು ಎಂದರೆ ಅಳತೆ ಮಾಡಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಚಕ್ಕುಬಂದಿ ಏನು ಎಂದರೆ ಪೂರ್ವಕ್ಕೆ – ಸರ್ಕಾರಿ ಹಳ್ಳ, ಪಶ್ಚಿಮಕ್ಕೆ – ಲೈನ್ ಮ್ಯಾನ್ ಕೃಷ್ಣಪ್ಪ ರವರ ಮನೆ ಮತ್ತು ಜಮೀನು ಅವರ ಸ.ನಂಬರ್ ಏನು ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಉತ್ತರಕ್ಕೆ – ಕೆಂಚಪ್ಪ ರವರ ತೋಟ, ಅವರ ಸ.ನಂಬರ್ ಏನು ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಕ್ಷಿಣಕ್ಕೆ –ರಂಗಹನುಮಯ್ಯ ರವರ ಜಮೀನು.

2. ದಾವಾ ಅನುಸೂಚಿ ಸ್ವತ್ತು ವಾದಿಯ ತಂದೆಗೆ ಹೇಗೆ ಬಂದಿರುತ್ತದೆ ಎಂದು ಹೇಳಲು ಅಗುತ್ತದಾ ಎಂದರೆ ಸಾಕ್ಷಿಯು ಅವರ ತಾತನ ಆಸ್ತಿ ಎಂದು

ನುಡಿಯುತ್ತಾರೆ. ಅವರ ತಾತನ ಎಷ್ಟು ಆಸ್ತಿಗಳು ಇದ್ದವು ಎಂದರೆ ಸಾಕ್ಷಿಯು 2-3 ಕಡೆ ಇದ್ದವು ಎಂದು ನುಡಿಯುತ್ತಾರೆ. ವಾದಿಗೆ ದಾವಾ ಅನುಸೂಚಿ ಸ್ವತ್ತು ಹೇಗೆ ಬಂದಿರುತ್ತದೆ ಎಂದರೆ ಸಾಕ್ಷಿಯು ಅಣ್ಣ ತಮ್ಮಂದಿರಲ್ಲಿ ಆದ ಭಾಗದಲ್ಲಿ ಬಂದಿರುತ್ತದೆ ಎಂದು ನುಡಿಯುತ್ತಾರೆ. ಎಷ್ಟು ವರ್ಷದ ಹಿಂದೆ ಭಾಗ ಆಗಿತ್ತು ಎಂದರೆ ಆಗ ನಾನು ಇನ್ನೂ ಹುಟ್ಟಿರಲಿಲ್ಲ ಎಂದು ನುಡಿಯುತ್ತಾರೆ. ಎಷ್ಟು ಎಷ್ಟು ಆಸ್ತಿಗಳನ್ನು ಅವರ ಅಣ್ಣ ತಮ್ಮಂದಿರು ಹಂಚಿಕೊಂಡಿದ್ದರು ಎಂದು ಗೊತ್ತಾ ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಾದಿಯ ತಂದೆ ಭದ್ರಯ್ಯ ಮತ್ತು ಅವರ ಅಣ್ಣ ತಮ್ಮಂದಿರು 1995-96 ರಲ್ಲಿ ತಮ್ಮ ಕುಟುಂಬದ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಭಾಗದಂತೆ ಸ.ನಂ.50/1 ರಲ್ಲಿ 20 ಗುಂಟೆ, 50/8 ರಲ್ಲಿ 12 ವರೆ ಗುಂಟೆ, 50/8 ರಲ್ಲಿ 7 ವರೆ ಗುಂಟೆ, 57/2 ರಲ್ಲಿ 2 ಗುಂಟೆ, 14/6 ರಲ್ಲಿ 3 ವರೆ ಗುಂಟೆ ಮತ್ತು 14/6 ರಲ್ಲಿ 3 ಗುಂಟೆ ರಂಗಯ್ಯ ರವರ ಭಾಗಕ್ಕೆ ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ. ಸ.ನಂ.50/1 ರಲ್ಲಿ 28 ಗುಂಟೆ, 50/8 ರಲ್ಲಿ 34 ಗುಂಟೆ, 14/6 ರಲ್ಲಿ 13 ಕಾಲು ಗುಂಟೆ ಭದ್ರಯ್ಯ ರವರ ಭಾಗಕ್ಕೆ ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ. ದಾವಾ ಅನುಸೂಚಿ ಸ್ವತ್ತು ವಾದಿಯ ತಂದೆಯ ಭಾಗಕ್ಕೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ವಾದಿಯು ಸುಳ್ಳು ದಾವೆಯನ್ನು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ಸ.ನಂ.50/8 ರಲ್ಲಿ 34 ಗುಂಟೆ ವಾದಿಯ ತಂದೆಯ ಭಾಗಕ್ಕೆ ಬಂದಿತ್ತು ಎಂದರೆ ಸರಿ. ಸ.ನಂ.50/8 ರ 34 ಗುಂಟೆಯ ಪಹಣಿ ಯಾರ ಹೆಸರಿನಲ್ಲಿ ಬರುತ್ತಿದೆ ಎಂದು ನೀವು ನೋಡಿದ್ದೀರಾ ಎಂದರೆ ನೋಡಿಲ್ಲ ಎಂದು ನುಡಿಯುತ್ತಾರೆ. ವಾದಿಯ ತಂದೆ ಮತ್ತು ಅವರ ಅಣ್ಣ ತಮ್ಮಂದಿರ ನಡುವೆ ಆದ ವಿಭಾಗದಲ್ಲಿ ಪ್ರತಿವಾದಿ ಚಿಕ್ಕರಂಗಯ್ಯ ರವರಿಗೆ ಸ.ನಂ.50/7 ಎ ರಲ್ಲಿನ 30 ಗುಂಟೆ, ದಾವಾ ಸ್ವತ್ತು ಆದ ಸ.ನಂ.50/7 ಬಿ ರಲ್ಲಿನ 32 ಗುಂಟೆ, ಸ.ನಂ.14/6 ರಲ್ಲಿನ 13 ಕಾಲು ಗುಂಟೆ ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ. 1995-96 ರಲ್ಲಿ ವಿಭಾಗ ಆದ ನಂತರ ಸ.ನಂ.50/7 ಎ ರಲ್ಲಿನ 30 ಗುಂಟೆ, ದಾವಾ ಸ್ವತ್ತು 50/7 ಬಿ ರಲ್ಲಿನ 32 ಗುಂಟೆ ಮತ್ತು ಸ.ನಂ.14/6 ರಲ್ಲಿನ 13 ಕಾಲು ಗುಂಟೆಯಲ್ಲಿ ಪ್ರತಿವಾದಿಯೇ

ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂದರೆ ಸಾಕ್ಷಿಯು ಇರುತ್ತಾರೆ ನಾವೇನು ನೋಡಿಲ್ಲ ಎಂದು ನುಡಿಯುತ್ತಾರೆ. 1995-96 ರಿಂದಲೂ ಪ್ರತಿವಾದಿಯ ಹೆಸರಿಗೆ ದಾವಾ ಸ್ವತ್ತಿನ ಖಾತೆ ಮತ್ತು ಪಹಣಿ ಬರುತ್ತಿದೆ ಎಂದರೆ ನನಗೆ ಗೊತ್ತಿಲ್ಲ ಸಾಕ್ಷಿ ಮುಂದುವರೆದು ವಾದಿಯು ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇದ್ದಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಯರು ದಾವಾ ಸ್ವತ್ತಿನಲ್ಲಿ ತೆಂಗು ಮತ್ತು ಅಡಿಕೆ ಬೆಳೆದು ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ವಾದಿಯು ನಿಮಗೆ ಏನಾಗಬೇಕು ಎಂದರೆ ಸಾಕ್ಷಿಯು ನನ್ನ ಅಣ್ಣನಾಗಬೇಕು ಎಂದು ನುಡಿಯುತ್ತಾರೆ. ವಾದಿಯು ನಿಮಗೆ ಅಣ್ಣನಾಗಿರುವ ಕಾರಣ ಅವರಿಗೆ ಸಹಾಯ ಮಾಡಲು ವಾದಿಯು ಸ್ವಾಧೀನದಲ್ಲಿ ಇದ್ದಾರೆ ಮತ್ತು ಪ್ರತಿವಾದಿಯು ಸ್ವಾಧೀನದಲ್ಲಿ ಇರುವುದಿಲ್ಲ ಎಂದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಿಂದ ನಿಮ್ಮ ಆಸ್ತಿಯವರೆಗೆ ಎಷ್ಟು ದೂರ ಎಂದರೆ ಕಾಲು ಕಿ ಮೀ ದೂರದಲ್ಲಿ ಇದೆ ಎಂದು ನುಡಿಯುತ್ತಾರೆ. ನಿಮ್ಮ ಆಸ್ತಿಯ ಸ.ನಂಬರ್ ಏನು ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಎಷ್ಟು ವಿಸ್ತೀರ್ಣದ ಆಸ್ತಿ ನಿಮಗೆ ಇರುತ್ತದೆ ಎಂದರೆ 8 ಎಕರೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಹತ್ತಿರದಲ್ಲಿ ನಿಮಗೆ ಯಾವುದೇ ಆಸ್ತಿ ಇಲ್ಲದೇ ಇದ್ದರೂ ಕೂಡ ವಾದಿಯು ನಿಮ್ಮ ಅಣ್ಣನಾಗಿರುವ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಪ್ರತಿವಾದಿ ನಿಮಗೆ ಏನಾಗಬೇಕು ಎಂದರೆ ಚಿಕ್ಕಪ್ಪನಾಗಬೇಕು ಎಂದು ನುಡಿಯುತ್ತಾರೆ. ನಿಮಗೆ ಎಲ್ಲಾ ವಿಚಾರ ಗೊತ್ತಿದ್ದರೂ ಕೂಡ ಸತ್ಯಾಂಶವನ್ನು ಮರೆಮಾಚಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

ಓ . ಹೇ. ಕೇ. ಸರಿ. ಇದೆ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಗುಬ್ಬಿ.

Pw1 present he is  cross examined by defendant counsel fully .

Defendant counsel prays time for cross of Pw2.

Call on.25.11.2024.